ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	49
ಸದಸ್ಯರ ಹೆಸರು	ಶ್ರೀ ಪಿ.ಆರ್ ರಮೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	07-12-2020
ಉತ್ತರಿಸಬೇಕಾದ ಸಚಿವರು	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಪ್ರಶ್ನೆ	ಉತ್ತರ
ಅ) ಇತ್ತೀಚೆಗೆ ಕರೋನ ವೈರಾಣು ರೋಗದ ಹಿನ್ನೆಲೆಯಲ್ಲಿ ರಾಜ್ಯಾದಾದ್ಯಂತ ಖಾಸಗಿ ಶಾಲೆಗಳಲ್ಲಿ ಅಂತರ್ಜಾಲ ಮುಖಾಂತರ ಶಿಕ್ಷಣ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಬಂದಿದೆ.
ಆ) ಅಂತರ್ಜಾಲ ಮುಖಾಂತರ ಶಿಕ್ಷಣ ನೀಡುತ್ತಿರುವ ಹಲವು ಖಾಸಗಿ ಶಾಲೆಗಳಲ್ಲಿ ಪ್ರಸಕ್ತ ವರ್ಷದ ಶೈಕ್ಷಣಿಕ ಶುಲ್ಕ ಪಾವತಿ ಮಾಡುವಂತೆ ಮಕ್ಕಳ ಪೋಷಕರಿಗೆ ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು; (ಮಾಹಿತಿ ನೀಡುವುದು)	ಖಾಸಗಿ ಶಾಲೆಗಳು ಆನ್‌ಲೈನ್ ವಿದ್ಯಾರ್ಥಿಗಳಿಗೆ ಭೋದನೆ, ಪಾಠಪ್ರವಚನ, ನಡೆಸುತಿದ್ದು, ಈ ಸಂಬಂಧ ಅಗತ್ಯ ಶುಲ್ಕ ಪಾವತಿಸುವಂತೆ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಇ-ಮೇಲ್ ಮತ್ತು ಎಸ್.ಎಂ.ಎಸ್ ಮೂಲಕ ಸೂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆಯುಕ್ತರು, ಸಾ.ಶಿ.ಇ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ಸಿ7(2)ಪ್ರಾಶಿಅ.ಶುಲ್ಕ.30:2020-21, ದಿನಾಂಕ: 05-09-2020ರಲ್ಲಿ ಖಾಸಗಿ ಅನುದಾನ ರಹಿತ ಶಾಲೆಗಳು ಮೊದಲನೇ ಕಂತಿನ ಅಧಿಕೃತ ಶುಲ್ಕವನ್ನು ಮಾತ್ರ ದಾಖಲಾತಿಗಾಗಿ ಪೋಷಕರಿಂದ ಪಡೆಯಲು ಅನುಮತಿ ನೀಡಲಾಗಿದೆ. ಆದರೆ, ಯಾವುದೇ ಕಾರಣಕ್ಕೂ ಕಳೆದ ವರ್ಷ ಪಡೆದ ಶುಲ್ಕಕ್ಕಿಂತ ಪ್ರಸ್ತುತ ವರ್ಷದ ಶುಲ್ಕವನ್ನು ಹೆಚ್ಚಿಸದಂತೆ ಸೂಚಿಸಿದೆ (ಅನುಬಂಧ-1). ಆನ್ ಲೈನ್ ಶಿಕ್ಷಣಕ್ಕೆ ಹೆಚ್ಚುವರಿ ಶುಲ್ಕವನ್ನು ಪಡೆಯದಂತೆ ಮಾನ್ಯ ರಾಜ್ಯ ಉಚ್ಚನ್ಯಾಯಾಲಯವು ಮಧ್ಯಂತರ ತೀರ್ಪು ನೀಡಿರುತ್ತದೆ.
ಇ) ಕಳೆದ 10 ವರ್ಷಗಳಿಂದ ಶಿಕ್ಷಣ ಹಕ್ಕು ಕಾಯ್ದೆ (ಆರ್.ಟಿ.ಇ)ಯಡಿಯಲ್ಲಿ ಸರ್ಕಾರ ದಿಂದ ಖಾಸಗಿ ಶಿಕ್ಷಣ ಶಾಲೆಗಳಿಗೆ ಕೊಡಬೇಕಾಗಿರುವ ಮೊತ್ತವೆಷ್ಟು; (ವರ್ಷವಾರು, ಜಿಲ್ಲಾವಾರು ವಿವರ ನೀಡುವುದು)	ಶಿಕ್ಷಣ ಹಕ್ಕು ಕಾಯ್ದೆ 2009, 2012-13ನೇ ಸಾಲಿನಿಂದ ಜಾರಿಯಲ್ಲಿದ್ದು, 2019-20ನೇ ಸಾಲಿನವರೆಗೆ ಬೇಡಿಕೆ ಸಲ್ಲಿಸಿದ ಶಾಲೆಗಳಿಗೆ ಮರುಪಾವತಿಗೆ ಕ್ರಮವಹಿಸಲಾಗಿದೆ. ವರ್ಷವಾರು ಜಿಲ್ಲಾವಾರು ವಿವಿಧ ಹಂತಗಳಲ್ಲಿ ಬೇಡಿಕೆ ಸಲ್ಲಿಕೆಗೆ ಹಾಗೂ ಪರಿಶೀಲನೆಗೆ ಶಾಲೆಗಳ ಬೇಡಿಕೆ ಪರಿಶೀಲನೆಯ ನಂತರವಷ್ಟೇ ಮಂಜೂರಾಗುವ ಮೊತ್ತದ ವಿವರ ಲಭ್ಯವಾಗುತ್ತದೆ. ಬಾಕಿಯಿರುವ ಶಾಲೆಗಳ ಪಟ್ಟಿ ಲಗತ್ತಿಸಿದೆ (ಅನುಬಂಧ-2).

ಈ) ಸರ್ಕಾರದ ಬೊಕ್ಕಸದಿಂದ ಖಾಸಗಿ ಶಾಲೆಗಳಿಗೆ ಪ್ರತಿ ವರ್ಷ ನೀಡುತ್ತಿರುವ ಶುಲ್ಕದ ಮೊತ್ತವನ್ನು ಕಡಿಮೆ ಮಾಡಲು ಪೂರಕ ಕ್ರಮಗಳನ್ನು ಕೈಗೊಳ್ಳುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ? (ವಿವರ ನೀಡುವುದು)	ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 36 ಪಿಜಿಸಿ 2018, ಬೆಂಗಳೂರು, ದಿನಾಂಕ:30-01-2019ರಲ್ಲಿ ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ತಿದ್ದುಪಡಿ) ನಿಯಮಗಳು, 2018ರಲ್ಲಿ ನಿಯಮ 4ಕ್ಕೆ ತಿದ್ದುಪಡಿ ಆದ ಕಾರಣ ನೆರೆಹೊರೆಯಲ್ಲಿ ಸರ್ಕಾರಿ ಅಥವಾ ಅನುದಾನಿತ ಶಾಲೆಗಳು ಲಭ್ಯವಿದ್ದಲ್ಲಿ ಅನುದಾನರಹಿತ ಶಾಲೆಗಳಿಗೆ ಆರ್.ಟಿ.ಇ ಸೀಟು ಹಂಚಿಕೆ ಮಾಡುವಂತಿಲ್ಲ. ಇದರಿಂದಾಗಿ 2019-20 ಮತ್ತು 2020-21ನೇ ಸಾಲಿನಲ್ಲಿ ಖಾಸಗಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಕಡಿಮೆಯಾಗಿದ್ದು, ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ತಕ್ಕ ಮಟ್ಟಿಗೆ ಹೊರೆ ಕಡಿಮೆಯಾಗಿದೆ.

ಇಡಿ 151 ಪಿಎಂಸಿ 2020

[ಎಸ್.ಸುರೇಶ್ ಕುಮಾರ್]
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ : ಪಿ7(2):ಪ್ರಾ.ಶಿ.ಅ:ಶುಲ್ಕ:30:2020-21 ದಿನಾಂಕ : 05.09.2020

-: ಸುತ್ತೋಲೆ :-

ವಿಷಯ : ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ 2020-21ನೇ ಸಾಲಿನಲ್ಲಿ ದಾಖಿಲಾತಿ ಹಾಗೂ ಶುಲ್ಕ ಪಡೆಯುವ ಕುರಿತು.

ಉಲ್ಲೇಖ : 1) ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರ ಸುತ್ತೋಲೆ ಸಂಖ್ಯೆ : ಸಹನಿಶಾಶಿ:ಆಶಾ:ಕ.ವ್ಯ.ಕು.ಜಾ.ಸು:32544:ಇ.ವಿ.2020, ದಿನಾಂಕ : 13.03.2020.

2) ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರ ಸುತ್ತೋಲೆ ಸಂಖ್ಯೆ : ಸಹನಿಶಾಶಿ:ಆಶಾ:ಕ.ವ್ಯ.ಕು.ಜಾ.ಸು:32544:ಇ.ವಿ.2020, ದಿನಾಂಕ : 24.03.2020.

\- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೋವಿಡ್-19ರ ಹಿನ್ನೆಲೆಯಲ್ಲಿ ಉಲ್ಲೇಖ (1)ರ ಸುತ್ತೋಲೆಯಂತೆ ರಾಜ್ಯದ ಎಲ್ಲಾ ಶಾಲೆಗಳಿಗೆ ದಿನಾಂಕ : 14.03.2020 ರಿಂದ ರಜೆಯನ್ನು ಘೋಷಿಸಲಾಗಿರುತ್ತದೆ.

2020-21ನೇ ಶೈಕ್ಷಣಿಕ ವರ್ಷವು ದಿನಾಂಕ : 01.06.2020 ರಿಂದ ಪ್ರಾರಂಭವಾಗಬೇಕಿತ್ತು. ಆದರೆ, ಕೋವಿಡ್-19ರ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಶಾಲಾ ಕಾಲೇಜುಗಳನ್ನು ನಿಗದಿತ ಸಮಯದಲ್ಲಿ ಪುನರಾರಂಭಿಸಲು ಸಾಧ್ಯವಾಗಿರುವುದಿಲ್ಲ.

ಉಲ್ಲೇಖ (2) ರ ಸುತ್ತೋಲೆಯಂತೆ ರಾಜ್ಯದ ಎಲ್ಲಾ ಶಾಲೆಗಳಲ್ಲಿ 2020-21ನೇ ಶೈಕ್ಷಣಿಕ ವರ್ಷದ ದಾಖಲಾತಿ ಪ್ರಕ್ರಿಯೆಯನ್ನು ಸರ್ಕಾರದ ಮುಂದಿನ ಆದೇಶದರೆಗೆ ಮುಂದೂಡಲು ಸೂಚಿಸಲಾಗಿತ್ತು.

ದಿನಾಂಕ : 14.03.2020 ರಿಂದ ಶಾಲೆಗಳಿಗೆ ರಜೆಯನ್ನು ಘೋಷಿಸಿದ್ದರಿಂದ ವಿದ್ಯಾರ್ಥಿಗಳು ಸುಮಾರು 5 ತಿಂಗಳುಗಳಿಗೂ ಹೆಚ್ಚಿನ ಕಾಲ ಶೈಕ್ಷಣಿಕ ಚಟುವಟಿಕೆಗಳಿಂದ ದೂರವಾಗಿದ್ದಾರೆ. ಅಲ್ಲದೇ ಕೋವಿಡ್-19 ಹಿನ್ನೆಲೆಯಲ್ಲಿ ಭೌತಿಕ ಶಾಲೆಗಳ ಪುನರಾರಂಭದ ಕುರಿತು ಅನಿಶ್ಚಿತತೆ ಮುಂದುವರೆದಿರುವುದರಿಂದ, ಮಕ್ಕಳನ್ನು ಪರ್ಯಾಯ ಮಾರ್ಗವಾಗಿ ಸಂಪರ್ಕಿಸಿ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸದೇ ಇದ್ದಲ್ಲಿ ಅವರು ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುವ ಸಂಭವವಿರುತ್ತದೆ.

ಮುಂದುವರೆದು ಹಲವು ಮಕ್ಕಳು ಶಾಲೆಯು ಪ್ರಾರಂಭವಾದ ನಂತರವೂ ಸಹ ಶಾಲೆಯಿಂದ ಹೊರಗುಳಿಯುವ ಸಾಧ್ಯತೆ ಇರುತ್ತದೆ. ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ್ಯವಿವಾಹದಂತೆ ಪಿಡುಗುಗಳಿಗೆ ತುತ್ತಾಗುವ ಅಪಾಯವಿರುತ್ತದೆ. ಆದ್ದರಿಂದ, ಶಾಲೆಗಳು ಭೌತಿಕವಾಗಿ ಪ್ರಾರಂಭವಾಗುವವರೆಗೆ ಮಕ್ಕಳನ್ನು ಇತರ ಪರ್ಯಾಯ ಮಾರ್ಗಗಳ ಮೂಲಕ ಸಂಪರ್ಕಿಸಿ ಅವರ ಮನೋಸ್ಥೈರ್ಯವನ್ನು ಹೆಚ್ಚಿಸುವ ಹಾಗೂ ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ಅವಶ್ಯಕವಾಗಿದೆ.

ಈ ನಿಟ್ಟಿನಲ್ಲಿ ಪ್ರಥಮ ಹಂತವಾಗಿ ಎಲ್ಲಾ ವಿದ್ಯಾರ್ಥಿಗಳು ಸರ್ಕಾರಿ, ಅನುದಾನಿತ ಅಥವಾ ಮಾನ್ಯತೆ ಪಡೆದ ಅನುದಾನರಹಿತ ಶಾಲೆಯಲ್ಲಿ ದಾಖಲಾಗಿರುವುದನ್ನು ಖಚಿತಪಡಿಸಬೇಕಾಗಿದೆ. ಆದ್ದರಿಂದ 2020-21ನೇ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿಯನ್ನು ದಿನಾಂಕ 30.09.2020ರೊಳಗೆ ಪೂರ್ಣಗೊಳಿಸಲು ಎಲ್ಲಾ ಶಾಲೆಗಳಿಗೆ ಹಾಗೂ ಪೋಷಕರಿಗೆ ತಿಳಿಸಲಾಗಿದೆ.

ಖಾಸಗಿ ಅನುದಾನ ರಹಿತ ಶಾಲೆಗಳು ಮೊದಲನೇ ಕಂತಿನ ಅಧಿಕೃತ ಶುಲ್ಕವನ್ನು ಮಾತ್ರ ಪೋಷಕರಿಂದ ಪಡೆಯಲು ಅನುಮತಿ ನೀಡಲಾಗಿದೆ. ಆದರೆ, ಯಾವುದೇ ಕಾರಣಕ್ಕೂ ಕಳೆದ ವರ್ಷ ಪಡೆದ ಶುಲ್ಕಕ್ಕಿಂತ ಪ್ರಸ್ತುತ ವರ್ಷದ ಶುಲ್ಕವನ್ನು ಹೆಚ್ಚಿಸದಂತೆ ಸೂಚಿಸಿದೆ. ಕೋವಿಡ್-19 ಹಿನ್ನೆಲೆಯಲ್ಲಿ ಪೋಷಕರು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಪ್ರಸ್ತುತ ವರ್ಷದ ಶುಲ್ಕವನ್ನು ಹಿಂದಿನ ಸಾಲಿನ ಶುಲ್ಕಕ್ಕಿಂತ ಕಡಿಮೆ ಮಾಡಲು ಆಡಳಿತ ಮಂಡಳಿಗಳು ಮುಕ್ತವಾಗಿರುತ್ತವೆ.

ಶಾಲೆ ಹಾಗೂ ಶಿಕ್ಷಕರು ಮಕ್ಕಳೊಂದಿಗೆ ಸಂಪರ್ಕ ಸಾಧಿಸಿ, ಅವರ ಮನೋಸ್ಥೈರ್ಯವನ್ನು ಹೆಚ್ಚಿಸುವ ಹಾಗೂ ನಿರಂತರ ಕಲಿಕೆಯನ್ನು ಮುಂದುವರೆಸುವುದಕ್ಕಾಗಿ ರಾಜ್ಯ ಸರ್ಕಾರವು **'ವಿದ್ಯಾಗಮ'** ಕಲಿಕಾ ಯೋಜನೆಯನ್ನು ಹೊರ ತಂದಿರುತ್ತದೆ **'ಸಂವೇದನಾ'** ಕಾರ್ಯಕ್ರಮದಲ್ಲಿ ದೂರದರ್ಶನದ ಮುಖಾಂತರ ಬೋಧನೆಯನ್ನು ಮುಂದುವರೆಸಲಾಗಿರುತ್ತದೆ. ಖಾಸಗಿ ಅನುದಾನ ರಹಿತ ಶಾಲೆಗಳು ಸಹ ತಮ್ಮ ಶಾಲೆಯಲ್ಲಿ ದಾಖಲಾಗುವ ಮಕ್ಕಳ ನಿರಂತರ ಕಲಿಕೆಯನ್ನು ಮುಂದುವರೆಸಲು 'ವಿದ್ಯಾಗಮ' ಹಾಗೂ 'ಸಂವೇದನಾ' ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅಥವಾ ತಮ್ಮದೇ ಆದ ಪರ್ಯಾಯ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲು ಸೂಚಿಸಿದೆ. ಪರ್ಯಾಯ ಕಾರ್ಯಕ್ರಮಕ್ಕೆ ವಿದ್ಯಾರ್ಥಿ / ಪೋಷಕರುಗಳಿಂದ ಯಾವುದೇ ಹೆಚ್ಚುವರಿ ಶುಲ್ಕವನ್ನು ಪಡೆಯುವಂತಿಲ್ಲ. ಎಲ್ಲಾ ಶಾಲೆಗಳು ಇಲಾಖೆಯು ನಿಗದಿಪಡಿಸಿರುವ ಶೈಕ್ಷಣಿಕ ವೇಳಾಪಟ್ಟಿಯನ್ನು ತಪ್ಪದೇ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳುವುದು.

ಮುಂದುವರೆದು, ಖಾಸಗಿ ಅನುದಾನ ರಹಿತ ಶಾಲೆಗಳು ವಿದ್ಯಾರ್ಥಿಗಳ ಪೋಷಕರುಗಳಿಂದ ಪಡೆಯುವ ಶುಲ್ಕದ ಮೊತ್ತದಿಂದ ಪ್ರಥಮ ವೆಚ್ಚವನ್ನಾಗಿ ತಮ್ಮ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರ ವೇತನವನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು ಹಾಗೂ ಈ ಕುರಿತು ಯಾವುದೇ ದೂರಗಳು ಬಾರದಂತೆ ಕ್ರಮ ವಹಿಸುವುದು.

5/9/20

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ :

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ವಿಭಾಗ
2. ಸಾರ್ವಜನಿಕ ಶಿಕ್ಷಣ ಇಲಾಖೆ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು)

ಪ್ರತಿಯನ್ನು ಮಾಹಿತಿಗಾಗಿ

1) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ತರುವಂತೆ ಕೋರಿದೆ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಿಕ್ಷಣ, ಬೆಂಗಳೂರು.
3) ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ – ಕರ್ನಾಟಕ, ಬೆಂಗಳೂರು

ಅನುಬಂಧ

2016–17ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಬಾಕಿ ಶಾಲೆಗಳ ಪಟ್ಟಿ (ದಿನಾಂಕ : 02–12–2020 ರಲ್ಲಿದ್ದಂತೆ)

District Name	School	BEO	DDPI	CPI
Bagalkot	0	0	0	0
Bangalore North	1	0	0	0
Bangalore Rural	1	0	0	0
Bangalore South	1	0	0	0
Belgaum	0	0	0	0
Bellary	2	0	0	0
Bidar	0	0	0	0
Bijapur	0	0	0	0
Chamrajnagar	0	0	0	0
Chikballapur	1	0	0	0
Chikkodi	0	0	0	0
Chikmagalur	0	0	0	0
Chitradurga	0	0	0	0
Dakshina Kannada	0	0	0	0
Davangere	0	0	0	0
Dharwad	0	0	0	0
Gadag	0	0	0	0
Gulbarga	1	1	0	0
Hassan	0	0	0	0
Haveri	0	0	0	0
Kodagu	0	0	0	0
Kolar	1	0	0	0
Koppal	0	0	0	0
Madhugiri	0	0	0	0
Mandya	1	0	0	0
Mysore	0	1	0	0
Raichur	0	0	0	0
Ramnagara	0	0	0	0
Shimoga	0	0	0	0
Sirsi	0	0	0	0
Tumkur	0	0	0	0
Udupi	0	0	0	0
Uttara Kannada	0	0	0	0
Yadgiri	0	0	0	0
Total:	9	2	0	0

ಅನುಬಂಧ

2017-18ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಬಾಕಿ ಶಾಲೆಗಳ ಪಟ್ಟಿ (ದಿನಾಂಕ : 02-12-2020 ರಲ್ಲಿದ್ದಂತೆ)

District Name	School	BEO	DDPI	CPI
BAGALKOT	1	0	2	0
BANGALORE NORTH	0	0	1	0
BANGALORE RURAL	0	0	0	0
BANGALORE SOUTH	1	0	1	0
BELGAUM	0	0	0	0
BELLARY	1	0	0	0
BIDAR	0	3	0	0
BIJAPUR	0	0	0	0
CHAMRAJNAGAR	0	0	0	0
CHIKBALLAPUR	0	0	0	0
CHIKKAMAGALURU	0	0	0	0
CHIKKODI	0	0	0	0
CHITRADURGA	0	0	0	0
DAKSHINA KANNADA	0	0	0	0
DAVANGERE	0	0	0	0
DHARWAD	0	1	0	0
GADAG	0	0	0	0
GULBARGA	1	0	0	0
HASSAN	0	0	0	0
HAVERI	0	0	0	0
KODAGU	0	1	0	0
KOLAR	1	0	0	0
KOPPAL	1	0	0	0
MADHUGIRI	0	0	0	0
MANDYA	0	0	0	0
MYSORE	2	0	0	0
RAICHUR	0	1	0	0
RAMNAGARA	0	0	0	0
SHIMOGA	0	0	0	0
SIRSI	0	0	0	0
TUMKUR	0	0	0	0
UDUPI	0	0	0	0
UTTARA KANNADA	0	0	0	0
YADGIRI	0	0	0	0
Total:	8	6	4	0

ಅನುಬಂಧ

2018-19ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಬಾಕಿ ಶಾಲೆಗಳ ಪಟ್ಟಿ (ದಿನಾಂಕ : 02-12-2020 ರಲ್ಲಿದ್ದಂತೆ)

District Name	School	BEO	DDPI	CPI
BAGALKOT	3	0	1	0
BANGALORE NORTH	3	0	0	0
BANGALORE RURAL	0	0	0	0
BANGALORE SOUTH	3	2	0	0
BELGAUM	1	0	0	0
BELLARY	0	0	0	0
BIDAR	4	2	0	0
BIJAPUR	1	2	0	0
CHAMRAJNAGAR	0	0	0	0
CHIKBALLAPUR	0	0	0	0
CHIKKODI	0	0	1	0
CHIKMAGALUR	1	1	0	0
CHITRADURGA	1	0	0	0
DAKSHINA KANNADA	0	0	0	0
DAVANGERE	0	0	0	0
DHARWAD	2	1	0	0
GADAG	0	1	1	0
GULBARGA	1	0	0	0
HASSAN	0	0	1	0
HAVERI	0	0	0	0
KODAGU	0	0	0	0
KOLAR	0	0	1	0
KOPPAL	2	0	0	0
MADHUGIRI	0	0	0	0
MANDYA	0	0	0	1
MYSORE	1	0	1	0
RAICHUR	1	0	0	0
RAMNAGARA	0	0	0	0
SHIMOGA	0	0	0	0
SIRSI	0	0	0	0
TUMKUR	0	0	0	0
UDUPI	0	0	0	0
UTTARA KANNADA	0	0	0	0
YADGIRI	0	3	0	0
Total:	24	12	6	1

ಅನುಬಂಧ

2019-20ನೇ ಸಾಲಿನ ಆರ್.ಟಿ.ಇ. ಶುಲ್ಕ ಮರುಪಾವತಿ ಬಾಕಿ ಶಾಲೆಗಳ ಪಟ್ಟಿ (ದಿನಾಂಕ : 02-12-2020 ರಲ್ಲಿದ್ದಂತೆ)

District Name	School	BEO	DDPI	CPI
BAGALKOT	21	1	3	0
BANGALORE NORTH	42	6	8	0
BANGALORE RURAL	0	0	2	0
BANGALORE SOUTH	246	24	30	0
BELGAUM	11	0	0	0
BELLARY	35	1	0	0
BIDAR	64	10	2	3
BIJAPUR	40	4	5	0
CHAMRAJNAGAR	3	0	0	0
CHIKBALLAPUR	2	0	1	0
CHIKKODI	19	4	2	0
CHIKMAGALUR	28	0	16	0
CHITRADURGA	5	0	0	0
DAKSHINA KANNADA	3	0	0	0
DAVANGERE	11	0	4	0
DHARWAD	23	0	1	0
GADAG	29	0	2	0
GULBARGA	28	1	9	0
HASSAN	5	0	2	0
HAVERI	3	0	2	0
KODAGU	0	0	0	0
KOLAR	11	0	7	0
KOPPAL	13	1	5	0
MADHUGIRI	1	0	4	0
MANDYA	15	0	4	0
MYSORE	15	3	3	0
RAICHUR	26	3	4	0
RAMNAGARA	3	0	0	0
SHIMOGA	39	2	7	0
SIRSI	1	1	0	0
TUMKUR	2	1	1	0
UDUPI	0	1	0	0
UTTARA KANNADA	1	0	4	0
YADGIRI	9	0	4	0
Total:	754	63	132	3